**ಓ ಎಸ್ ನಂಃ 143/2023** **ಪಿ ಡಬ್ಲೂಃ1 ಶ್ರೀಮತಿ ಅಕ್ಕಮಹಾದೇವಿ**

ದಿನಾಂಕಃ 02/02/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಮ್ ಜಿ ಎಚ್ ವಕೀಲರಿಂದಃ</u>

6. ರಾಚಯ್ಯ ಅವರು ಯಾವಾಗ ತೀರಿಕೊಂಡರು ಎಂದು ನನಗೆ ನೆನಪಿಲ್ಲ. ಈ ಕೇಸನ್ನು ರಾಚಯ್ಯ ಮತ್ತು ವೀರಭದ್ರಯ್ಯ ಅವರ ಆಸ್ತಿಯಲ್ಲಿ ನನಗೂ ಹಿಸ್ಸಾ ಇದೆ ಎಂದು ಈ ದಾವೆ ಹಾಕಿದ್ದೇನೆ. ನಾನು ಅವರ ಮಗಳು ರಾಚಯ್ಯ ತೀರಿಕೊಂಡ ನಂತರ ವಾರಸಾ ಕೋರಿ ಅರ್ಜಿ ಹಾಕಿದ್ದೀರಾ ಎಂದರೆ ಇಲ್ಲ. ನನ್ನ ತಂದೆ ವೀರಭದ್ರಯ್ಯ ಜೀವಂತವಿದ್ದ ಕಾರಣ ವಾರಸಾಗೆ ಅರ್ಜಿ ನಾನು ಕೊಡಲಿಲ್ಲ. ನನ್ನ ಜನಕ ತಂದೆ ರಾಚಯ್ಯ. ವೀರಭದ್ರಯ್ಯ ನನ್ನ 2 ನೇ ತಂದೆ. ವೀರಭದ್ರಯ್ಯ ನನ್ನ ತಂದೆ ಎಂದು ದಿಃ 02-01-2017 ರಂದು ಧಾರವಾಡದಲ್ಲಿ ವಾರಸಾಗೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಸದರಿ ಅರ್ಜಿಗೆ ಪ್ರತಿವಾದಿ ನನಗೆ ಮೃತ್ಯು ಪತ್ರ ಇದ್ದ ಕಾರಣ ಅರ್ಜಿ ರದ್ದು ಕೋರಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಧಾರವಾಡ ತಹಶೀಲ್ದಾರ ಸದರಿ ಅರ್ಜಿಯನ್ನು ವಜಾ ಮಾಡಿ ವಾರಸಾ ಮೂಲ ಪ್ರತಿಯನ್ನು ವಾಪಸ್ಸು ಕೊಡುವಂತೆ ಆದೇಶ ಮಾಡಿದ್ದರು ಎಂದರೆ ಸರಿ.

7. ದಾವಾ ಆಸ್ತಿ ಚಕಬಂದಿ ಹೇಳಲಾಗುತ್ತದೆಯಾ ಎಂದರೆ ನೆನಪಿಲ್ಲ. ಮೂರು ಮನೆಗಳ ಚಕಬಂದಿ ಹೇಳಲಾಗುತ್ತದೆಯಾ ಎಂದರೆ ನೆನಪಿಲ್ಲ. ವಿ ಪಿ ಸಿ ನಂಬರ 207/2 ಬಿ1+2 ರ ಆಸ್ತಿ ಸೀಮಯ್ಯ ಅವರ ಪಾಲಿಗೆ ಬಂದ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ಪ್ರತಿವಾದಿ ಸೀಮಯ್ಯನಿಗೆ ಹಣ ಕೊಟ್ಟು ತನ್ನ ಹೆಸರಿಗೆ ಮಾಡಿಕೊಂಡಿದ್ದ ಎಂದರೆ ಸರಿ. ಈ ವಿಚಾರ ನನಗೆ ಗೊತ್ತಿದ್ದರು ಸಹ ಸದರಿ ಆಸ್ತಿಯಲ್ಲಿ ನನಗೂ ಹಿಸ್ಸಾ ಇದೆ ಎಂದು ಸುಳ್ಳು ಕೇಸು ಹಾಕಿದ್ದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಸೀಮಯ್ಯನಿಗೆ ಸೇರಿರುವ ಕಾರಣ ಪಾಲು ಕೇಳಲು ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ವಿ ಪಿ ಸಿ ನಂಬರ 208 ಪ್ರತಿವಾದಿಯ ಹೆಂಡತಿ ಮಹಾದೇವಿ ಅವರ ಹೆಸರಿನಲ್ಲಿದೆ ಎಂದರೆ ಸರಿ. ಈ ವಿಚಾರ ಗೊತ್ತಿದ್ದರು ಸಹ ಸದರಿ ಆಸ್ತಿ ನನ್ನ ತಂದೆಗೆ ಸೇರಿದ ಆಸ್ತಿ ಎಂದು ಪಾಲು ಇದೆ ಎಂದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ವಿ ಪಿ ಸಿ ನಂಬರ 208 ಮಹಾದೇವಿ ಹೆಸರಿನಲ್ಲಿದ್ದ ಕಾರಣ ಸದರಿ ಆಸ್ತಿಯ ಕಾಗದ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ದಿಃ 31-12-1998 ರಲ್ಲಿ ನನ್ನ ತಂದೆ ಹಾಗೂ ಚಿಕ್ಕಪ್ಪಂದಿರು ಎಲ್ಲರೂ ಸೇರಿ ಕುಟುಂಬದ ಆಸ್ತಿಗಳ ಸಂಬಂಧ ವಾಟ್ನಿ ಮಾಡಿಕೊಂಡಿದ್ದರು ಎಂದರೆ ಸರಿ. ಈ ವಿಚಾರ ನನಗೆ ಗೊತ್ತಿತ್ತು ಎಂದರೆ ನಾನು ಆಗ ಚಿಕ್ಕವಳಿದ್ದೆ.

ಎಷ್ಟು ವಯಸ್ಸಿತ್ತು ಎಂದು ನನಗೆ ಗೊತ್ತಿಲ್ಲ. ನಿಪಿ. 4 ನ್ನು ಓದಿ ತಿಳಿದುಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿ. 1985 ರಲ್ಲಿ ನನ್ನ ಮದುವೆ ಪಂಚಯ್ಯ ಅವರೊಂದಿಗೆ ಆಗಿತ್ತು ಎಂದರೆ ಸರಿ. ನನ್ನ ಮದುವೆ ಸಮಯದಲ್ಲಿ ನಿಮಗೆ ಎಷ್ಟು ವಯಸ್ಸಿತ್ತು ಎಂದು ನನಗೆ ನೆನಪಿಲ್ಲ. ನನಗೆ 18 ವರ್ಷ ತುಂಬಿದ ನಂತರ ನನ್ನ ಮದುವೆ ಆಗಿದೆ ಎಂದರೆ ಸರಿ. ನಿಪಿ. 4 ರ ಸಮಯದಲ್ಲಿ ನಾನು ಚಿಕ್ಕವಳಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಅಸಲು ದಾವಾ ನಂಬರ 213/2017 ನ್ನು ನಾನು ಹಿಸ್ಸಾ ಕೋರಿ ಧಾರವಾಡ ನ್ಯಾಯಾಲಯದಲ್ಲಿ ಹಾಕಿದ್ದೇನೆ. ಸದರಿ ದಾವೆಯನ್ನು ವೀರಭದ್ರಯ್ಯನವರ ಆಸ್ತಿಯ ಮೇಲೆ ಹಾಕಿದ್ದೇನೆ. ನನ್ನ ಗಂಡ ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆ ನಂತರ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗ ಎಂದು ನೇಮಕಗೊಂಡರು ಎಂದರೆ ಸರಿ. ನಂತರದಲ್ಲಿ ಸರ್ಕಲ್ ಎಂದು ಪದೋನ್ನತಿ ಹೊಂದಿದ್ದರು ಎಂದರೆ ಸರಿ. 1998 ರಲ್ಲಿ ಕುಂದಗೋಳದಲ್ಲಿ ಸರ್ಕಲ್ ಎಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಗಂಡ ಕುಂದಗೋಳದಲ್ಲಿ ಕರ್ತವ್ಯದಲ್ಲಿದ್ದಾಗ ನಿಪಿ. 4 ರ ವಾಟ್ನಿ ಪತ್ರ ಆಗಿತ್ತು ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಕೈ ಬಿಟ್ಟು ವಾಟ್ನಿ ಮಾಡಿಕೊಂಡಿದ್ದಾರೆ ಎಂದು ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಇಲ್ಲ. ಸದರಿ ವಾಟ್ನಿಗೆ ನನ್ನ ಒಪ್ಪಿಗೆ ಇದ್ದ ಕಾರಣ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಈ ದಾವಾದಲ್ಲಿ ಸರಿಯಾದ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಖಾತಾದ ಉತಾರದಲ್ಲಿ ಇರುವ ಎಲ್ಲ ಪಕ್ಷಕಾರರನ್ನು ಈ ದಾವಾದಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ರಾಚಯ್ಯನ ಮಗಳು ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲೆಂದು ಸುಳ್ಳು ದಾವಾ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.